



## ಕುಂಚ ಪ್ರಪಂಚ



**ಶ್ರೇಯಸ್ ಭಟ್**
6ನೇ ತರಗತಿ
ಜೆಎಸ್ಎಸ್ ಪಬ್ಲಿಕ್ ಶಾಲೆ
ಎಚ್ಎಸ್ಆರ್ ಲೇಔಟ್
ಬೆಂಗಳೂರು

**ನೀವೂ ಚಿತ್ರ ಬರೆಯಿರಿ**

‘ಸುಧಾ’ ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ– ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ– ರೇಖಾ ಚಿತ್ರಗಳನ್ನು ಕಳುಹಿಸಬಹುದು.
ಇ ಮೇಲ್
editorsu@sudha.co.in

# ಪುಟ್ಟನ ಮಾವಿನ ಮರ

ಪುಟ್ಟನೊಂದು ಮಾವು ತಿಂದ
ಸಿಪ್ಪೆ ಎಲ್ಲ ಹಸುವಿಗಿಟ್ಟ
ಗುಂಡಿ ತೋಡಿ ವಾಟೆ ಹೂತ
ಒಡ್ಡು ಕಟ್ಟಿ ನೀರು ಹನಿಸಿದ

ವಾರವೆರಡು ಕಳೆಯಿತು
ವಾಟೆ ಮೊಳಕೆಯೊಡೆಯಿತು
ಗೆಳೆಯರನ್ನೆಲ್ಲ ಕರೆದನು
ಮಾವಿನ ಗಿಡ ನೋಡಿರೆಂದನು

ನಿದ್ರೆ ಹೋದ ರಾತ್ರಿ ಪುಟ್ಟ
ಕನಸನೊಂದ ಕಂಡನು
ನೆಟ್ಟ ವಾಟೆ ಮರವು ಆಗಿ
ಮರದ ತುಂಬ ಹಣ್ಣು ತೂಗಿ

ಮರವನೇರಿ ಕುಳಿತ ಪುಟ್ಟ
ಸ್ನೇಹಿತರನ್ನು ಕೂಗಿ ಕರೆದ
ಹಣ್ಣು ಕೊಯ್ದು ಬುಟ್ಟಿ ತುಂಬ
ತುಂಬಿ ತುಂಬಿ ಕೊಟ್ಟನು

ಕೆಳಗೆ ಪುಟ್ಟ ಇಳಿಯ ಹೊರಟ
ಕಾಲು ಜಾರಿ ಬಿದ್ದು ಬಿಟ್ಟ
ಬೆಳಗು ಆಗಿ ಕನಸು ಕರಗಿ
ಮಂಚದಿಂದ ಕೆಳಗೆ ಉರುಳಿದ

ತೋಟದತ್ತ ಓಡಿ ಹೋಗಿ
ಮಾವಿನ ಮರವ ಹುಡುಕಿದ
ವಾಟೆಯಿಂದ ಕೆಂಪು ಕೆಂಪು
ಎಲೆಗಳೆರಡು ಕಂಡವು

ಬೀಜ ಬಲಿತು ಮೊಳಕೆಯಾಗಿ
ಎಲೆಯು ಒಡೆದು ಗಿಡವು ಆಗಿ
ಹೂವು ಬಿಟ್ಟು ಕಾಯಿ
ಹಣ್ಣಾಗಲು
ಕಾಯಕಬೇಕು, ಕಾಯಬೇಕು

■ ಗೌರಿ ಚಂದ್ರಕೇಸರಿ

